(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:269/2014-15 ದಿನಾಂಕ:28.04.2016.

ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ
ಸಹಾಯಕ ಅಯುಕ್ತರು, ಹೊಸಪೇಟೆ.

********

**ವಾದಿಗಳು: ಶ್ರೀ/ ಶ್ರೀಮತಿ**

1. ಬಿಂಗಿ ಅಂಬಣ್ಣ ತಂದೆ ಬಸಪ್ಪ,
**ವಾಸ:** 15ನೇ ವಾರ್ಡ್, ಮಂಡಾಳ್ ಓಣಿ, ಕಂಪ್ಲಿ,
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ತಹಶೀಲ್ದಾರರು, ಹೊಸಪೇಟೆ

[ ಶ್ರೀ ಕೊಟ್ರೇಶ್ ಹಿರೇಮಠ, ವಕೀಲರು, ಹೊಸಪೇಟೆ ]

**ವ್ಯಾಜ್ಯದ ಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಕಂಪ್ಲಿ | ಕಂಪ್ಲಿ | 1370/ಬಿ/3 | 01 ಎಕರೆ 00 ಸೆಂಟ್ಸ್ |

**ಪೀಠಿಕೆ:-**

ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಕಂಪ್ಲಿ ಗ್ರಾಮದ ಸ.ನಂ.1370/ಬಿ/3 ಪೈಕಿ ವಿಸ್ತೀರ್ಣ:01 ಎಕರೆ 00 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕಂಪ್ಲಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.86/2013-14 ದಿನಾಂಕ:09.05.2014 ವನ್ನು ಪ್ರಶ್ನಿಸಿ ವಾದಿಪರ ವಕೀಲರು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಮೇಲ್ಮನವಿಯನ್ನು ಮತ್ತು ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಲು ಕೋರಿ ಕಾಲಮಿತಿ ಕಾಯ್ದೆಯ ಕಲಂ 5 ರಡಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:30.04.2015 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಪರ ವಕೀಲರ ಪ್ರಕಾರ, ಸದರಿ ವ್ಯಾಜ್ಯದ ಜಮೀನು ಮೂಲತ: ಬಿಂಗಿ ನಾಗಪ್ಪ ಇವರಿಗೆ ಸಂಬಂಧಿಸಿದ್ದು, ಬಿಂಗಿ ನಾಗಪ್ಪ ಇವರು ಬಿಂಗಿ ಅಂಬಮ್ಮ ಇವರ ತಂದೆಯಾಗಿದ್ದು, ವಾದಿಯು ಇವರ ಮೊಮ್ಮಗನಾಗಿದ್ದು, ಸದರಿ ವ್ಯಾಜ್ಯದ ಜಮೀನನ್ನು ಬಿಂಗಿ ನಾಗಪ್ಪ ಇವರು ಬಿಂಗಿ ಅಂಬಮ್ಮ ಇವರಿಗೆ ನೀಡಿದ್ದು, ಆ ಪ್ರಕಾರವಾಗಿ ಸದರಿ ವ್ಯಾಜ್ಯದ ಜಮೀನು ಬಿಂಗಿ ಅಂಬಮ್ಮ ಗಂಡ ಬಸಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆಯಾಗಿರುತ್ತದೆ. ಬಿಂಗಿ ಅಂಬಮ್ಮ ಇವರು ವಾದಿಯತಯಿಯಾಗಿದ್ದು, ಬಸಪ್ಪ ಇವರ ಧರ್ಮಪತ್ನಿಯಾಗಿದ್ದು, ಆದರೆ ಪಹಣಿ ಪತ್ರಿಕೆಯಲ್ಲಿ ಬಿಂಗಿ ಅಂಬಮ್ಮ ಗಂಡ ಬಸಪ್ಪ ಎಂದು ನಮೂದು ಮಾಡುವ ಬದಲಾಗಿ ಬಿಂದಿ ಅಂಬಮ್ಮ ಗಂಡ ದೊಡ್ಡ ಬಸಪ್ಪ ಎಂದು ತಪ್ಪಾಗಿ ನಮುದು ಮಾಡಿರುವುದಾಗಿ ವಾದಿಪರ ವಕೀಲರು ತಿಳಿಸಿರುತ್ತಾರೆ.

ಸದರಿ ಬಿಂಗಿ ಅಂಬಮ್ಮ ಇವರು ದಿನಾಂಕ:04.03.2013 ರಂದು ಮರಣ ಹೊಂದಿರುವುದಾಗಿ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುತ್ತಾರೆ. ಇವರ ವಾರಸುದಾರರಾಗಿ ಇವರ ಗಂಡ ಹಾಗೂ ವಾದಿಯನ್ನು ಬಿಟ್ಟುಹೋಗಿರುವುದಾಗಿ, ಬಿಂಗಿ ಅಂಬಮ್ಮ ಇವರ ಮರಣಾನಂತರ ವಾದಿಯು ತನ್ನ ತಂದೆಯ ಒಪ್ಪಿಗೆ ಮೇರೆಗೆ ತನ್ನ ಹೆಸರಿಗೆ ಹಕ್ಕು ಬದಲಾವಣೆಗಾಗಿ ತಹಶೀಲ್ದಾರರು, ಹೊಸಪೇಟೆ ಇವರಲ್ಲಿ ಅರ್ಜಿ ಸಲ್ಲಿಸಲಾಗಿದ್ದು,

ಈ ಬಗ್ಗೆ ವಾದಿಯ ತಂದೆಗೆ ಯಾವುದೇ ತಕರಾರು ಇರುವುದಿಲ್ಲ ಎಂದು, ಈ ಬಗ್ಗೆ ಭೂಮಿ ಒಪ್ಪಿಗೆ ಪತ್ರದ ಅಫಿಡವಿಟ್ ಅನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

ಸದರಿ ಬಿಂಗಿ ಅಂಬಮ್ಮ ಇವರ ಕಾನೂನುಬದ್ಧ ವಾರಸುದಾರರಾಗಿ ವಾದಿ ಹಾಗೂ ವಾದಿಯ ತಂದೆಯು ಸದರಿ ಜಮೀನಿನ ಹಕ್ಕು ಮತ್ತು ಸ್ವಾಧೀನಾನುಭವವನ್ನು ಹೊಂದಿರುತ್ತಾರೆಂದು, ಆದರೆ ಕಂದಾಯ ಅಧಿಕಾರಿಗಳು ಪಹಣಿ ಪತ್ರಿಕೆಯಲ್ಲಿ ಬಿಂಗಿ ಅಂಬಮ್ಮ ಗಂಡ ಬಸಪ್ಪ ಎಂದು ನಮೂದು ಮಾಡುವ ಬದಲಾಗಿ ಬಿಂಗಿ ಅಂಬಮ್ಮ ಗಂಡ ದೊಡ್ಡಬಸಪ್ಪ ಎಂದು ತಪ್ಪಾಗಿ ನಮೂದು ಮಾಡಿದ್ದು, ಸದರಿ ತಪ್ಪಿನಿಂದಾಗಿ ತಹಶೀಲ್ದಾರರು, ಹೊಸಪೇಟೆ ಇವರು ವಾದಿಗಳು ಸಲ್ಲಿಸಿದ ಯಾವುದೇ ದಾಖಲೆಗಳನ್ನು ಪರಿಶೀಲಿಸದೇ ಸದರಿ ಪ್ರಶ್ನಿತ ಹಕ್ಕು ಬದಲಾವಣೆಯನ್ನು ತಿರಸ್ಕರಿಸಿರುವುದಾಗಿ, ಸದರಿ ಆದೇಶವು ಕಾನೂನುಬಾಹಿರವಾಗಿರುವುದಾಗಿ ತಿಳಿಸಿರುತ್ತಾರೆ.

ಸದರಿ ಪ್ರಶ್ನಿತ ಆದೇಶದಿಂದ ಬಾದಿತಗೊಂಡ ವಾದಿಯು ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಪ್ರಶ್ನಿತ ಆದೇಶವನ್ನು ರದ್ದುಪಡಿಸಲು ಹಾಗೂ ಬಿಂಗಿ ಅಂಬಮ್ಮ ಇವರ ಹೆಸರನ್ನು ಕಡಿಮೆ ಮಾಡಿ, ಪೋತಿ ವಾರಸ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿ ಮೇಲ್ಮನವಿ ಸಲ್ಲಿಸಿರುವುದಾಗಿ ವಾದಿಪರ ವಕೀಲರು ತಿಳಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಕಂಪ್ಲಿ ಗ್ರಾಮದ ಸ.ನಂ.1370/ಬಿ/3 ಪೈಕಿ ವಿಸ್ತೀರ್ಣ:01 ಎಕರೆ 00 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕಂಪ್ಲಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.86/2013-14 ದಿನಾಂಕ:09.05.2014 ವನ್ನು ರದ್ದುಪಡಿಸುತ್ತಾ, ಪೋತಿ ವಾರಸ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಕಂಪ್ಲಿ ಗ್ರಾಮದ ಸ.ನಂ.1370/ಬಿ/3 ಪೈಕಿ ವಿಸ್ತೀರ್ಣ:01 ಎಕರೆ 00 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕಂಪ್ಲಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಹೆಚ್.86/2013-14 ದಿನಾಂಕ:09.05.2014 ವನ್ನು ರದ್ದುಪಡಿಸುತ್ತಾ, ಪೋತಿ ವಾರಸ ಪ್ರಕಾರ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹೊಸಪೇಟೆ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:28.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ
ಪ್ರತಿಯನ್ನು:- ತಹಶೀಲ್ದಾರರು, ಹೊಸಪೇಟೆ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ
ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.